ಮಾಡುತ್ತಿದೆ, ಅದೊಂದು ವೈಬ್ ಕ್ರಿಯೇಟ್ ಮಾಡುತ್ತಾ ಎಂದು ಯೋಚನೆ ಮಾಡುತ್ತೇನೆ. ಕಥೆ ಮೇಲೆ ನಂಬಿಕೆ ಇಟ್ಟುಕೊಂಡು ಮುಂದಡಿ ಇಡುತ್ತೇನೆ. ಇದರ ನಂತರ ಅಪ್ರೋಚ್, ಬಜೆಟ್ ಬರುತ್ತದೆ.

◆ ನವೀನ್ ನಿರೀಕ್ಷೆಯ ಪಾತ್ರಗಳು?

ಇಂಥದ್ದೇ ನಿರ್ದಿಷ್ಟ ಪಾತ್ರ ಎಂದೇನಿಲ್ಲ. ನಾನು ಮಾಡುವ ಯಾವುದೇ ಪಾತ್ರ ಮನಸ್ಸಿಗೆ ನಾಟುವಂತಿರಬೇಕು ಅಷ್ಟೆ. ಆ ಪಾತ್ರ ನಗು ಉಕ್ಕಿಸುತ್ತ ಅಥವಾ ಭಾವನೆಗಳಿಂದ ನಮ್ಮನ್ನು ಕಟ್ಟಿಹಾಕುತ್ತಾ, ಅಥವಾ ಅದರದ್ದೇ ಒಂದು ವಿಶೇಷ ರೀತಿಯನ್ನು ಹೊಂದಿರುತ್ತದಾ ಎಂದು ಮೊದಲು ಪಾತ್ರದ ಆಯಾಮವನ್ನು ನೋಡುತ್ತೇನೆ. ನಂತರ ಅದಕ್ಕೆ ತಕ್ಕಂತೆ ಹೊಂದಿಸುತ್ತಾ ಹೋಗುತ್ತೇನೆ. ಚಿಕ್ಕವಯಸ್ಸಿನಲ್ಲಿ ನೋಡುತ್ತಿದ್ದ ಸಿನಿಮಾಗಳನ್ನು ಮೆಲುಕು ಹಾಕಿದರೆ, ಎಲ್ಲ ರೀತಿಯ, ಎಲ್ಲ ಶೇಡ್‌ಗಳ ಪಾತ್ರಗಳೂ ಇಷ್ಟವಾಗುತ್ತವೆ. ಅಂಥ ಪಾತ್ರಗಳನ್ನು ನಾನೂ ಮಾಡಬೇಕು ಎನಿಸುತ್ತದೆ. ಒಂದೊಂದು ಸಿನಿಮಾ ಒಂದೊಂದು ರೀತಿ ಇನ್‌ಸ್ಪೈರ್ ಮಾಡುತ್ತದೆ. ಅವಕಾಶದಂತೆ ಎಲ್ಲವೂ ಸಾಗುತ್ತದೆ.

◆ ಸದ್ಯ ನಿಮ್ಮ ಲಿಸ್ಟ್‌ನಲ್ಲಿರುವ ಸಿನಿಮಾಗಳು?

ಸದ್ಯ ಶಿವರಾಜ್‌ಕುಮಾರ್ ಅವರೊಂದಿಗೆ ನಟಿಸುತ್ತಿದ್ದೇನೆ. 'ಗುಲ್ಟೂ' ಸಿನಿಮಾ ನಿರ್ದೇಶಕರ ಜೊತೆ ಮತ್ತೊಂದು ಸಿನಿಮಾ ಮಾಡುತ್ತಿದ್ದೇನೆ. 'ನೋಡಿದವರು ಏನಂತಾರೆ' ಸಿನಿಮಾ ಬಿಡುಗಡೆಗೆ ಸಿದ್ಧವಾಗಿದ್ದು, ಡಿಸೆಂಬರ್ ಅಥವಾ ಜನವರಿಯಲ್ಲಿ ಬಿಡುಗಡೆಯಾಗುವ ನಿರೀಕ್ಷೆಯಿದೆ.

◆ ಸಿನಿಮಾರಂಗದಲ್ಲಿ ನಿಮ್ಮ ಮುಂದಿನ ನಡೆ?

ನಾವೆಲ್ಲ ಯಾವಾಗಲೂ ಉತ್ತಮವಾದದ್ದನ್ನೇ ಬಯಸುವುದು, ಕನಸು ಕಾಣುವುದು. ನಮ್ಮ ಹಿರಿಯರು ಒಂದು ಒಳ್ಳೆಯ ಹಾದಿಯನ್ನು ಸೃಷ್ಟಿ ಮಾಡಿದ್ದಾರೆ. ಕನ್ನಡ ಸಿನಿಮಾರಂಗವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ತೆಗೆದುಕೊಂಡು ಹೋಗಿದ್ದಾರೆ. ಒಳ್ಳೆಯ ಇತಿಹಾಸವಿರುವ ಸಿನಿಮಾರಂಗ ನಮ್ಮದು. ಹೀಗಿದ್ದಾಗ ಈಗ ನಾವೇನು ಮಾಡಬೇಕು, ಏನು ಮಾಡುತ್ತಿದ್ದೇವೆ, ಎಷ್ಟು ಶ್ರಮ ಹಾಕಬೇಕು ಎಂಬುದನ್ನು ಯೋಚಿಸಿ ಉತ್ತಮವಾಗಿರುವುದನ್ನು ನೀಡಬೇಕು. ವೈಯಕ್ತಿಕ ಮಟ್ಟದಲ್ಲಿ ಹೇಳುವುದಾದರೆ, ನಮ್ಮ ಸಿನಿಮಾಗಳಲ್ಲೇ ನಾವು ಉತ್ತಮವಾಗುತ್ತಾ ಹೋಗಬೇಕು. ■

# ಹೊಸ ಭಾವದ ಪುಳಕದಲ್ಲಿ ವೈಭವಿ



ತಮಿಳು, ಮರಾಠಿ ಸಿನಿಮಾಗಳಲ್ಲಿ ನಟಿಸಿ ಸೈ ಎನಿಸಿಕೊಂಡಿರುವ ನಟ ವೈಭವಿ ಶಾಂಡಿಲ್ಯ ಸದ್ಯ ಕನ್ನಡದತ್ತ ತಮ್ಮ ಗಮನ ನೀಡಿದ್ದಾರೆ. ಧ್ರುವ ಸರ್ಜಾ ಅಭಿನಯದ 'ಮಾರ್ಟಿನ್' ಸಿನಿಮಾದಲ್ಲಿ ಅವರು ನಟಿಸಿದ್ದು, ಈ ಸಿನಿಮಾ ತಮಗೆ ಒಂದೊಳ್ಳೆಯ ಭವಿಷ್ಯ ರೂಪಿಸಿಕೊಡುವ ನಿರೀಕ್ಷೆಯಲ್ಲಿದ್ದಾರೆ.

ಅಂದಹಾಗೆ ವೈಭವಿಯವರದ್ದು ಕನ್ನಡದಲ್ಲಿ ಇದು ಮೂರನೇ ಸಿನಿಮಾ, ನಟ ಶರಣ್ ಜೊತೆ 'ರಾಜ್ ವಿಷ್ಣು' ಸಿನಿಮಾ ಮೂಲಕ ಕನ್ನಡಕ್ಕೆ ಬಂದಿದ್ದ ವೈಭವಿ, 'ಗಾಳಿಪಟ 2' ಸಿನಿಮಾದಲ್ಲಿಯೂ ಕಾಣಿಸಿಕೊಂಡಿದ್ದರು. ಇದೀಗ ಮೂರನೇ ಸಿನಿಮಾ 'ಮಾರ್ಟಿನ್'ನಲ್ಲಿ ನಟಿಸಿದ್ದಾರೆ.

ಮಾರ್ಟಿನ್ ಬಹುಭಾಷಾ ಸಿನಿಮಾ ಆಗಿರುವುದರಿಂದ ಈ ಸಿನಿಮಾ ತಮ್ಮ ವೃತ್ತಿಭವಿಷ್ಯಕ್ಕೆ ಬಹುಮುಖ್ಯ ಮೈಲಿಗಲ್ಲು ಎಂದು ಭಾವಿಸಿದ್ದಾರೆ.

"ಮಾರ್ಟಿನ್" ನಂತರ ನನ್ನ ಕರಿಯರ್ ಶುರುವಾಗಿದೆ ಎನಿಸುತ್ತಿದೆ. ಜೊತೆಗೆ ಈ ಸಿನಿಮಾ ನನ್ನನ್ನು ಎಲ್ಲಿ ಕರೆದುಕೊಂಡು ಹೋಗುತ್ತದೆ ಎಂಬ ಕಾತರ, ನಿರೀಕ್ಷೆಯೂ ತುಂಬಿದೆ. ಈ ಸಿನಿಮಾ ನನ್ನನ್ನು ಜಗತ್ತಿನ ಪ್ರೇಕ್ಷಕರ ಮುಂದೆ ನಿಲ್ಲಿಸಿದೆ. ನಾನಿನ್ನೂ ಈಗ ಸಿನಿಮಾರಂಗಕ್ಕೆ ಹೆಜ್ಜೆಯಿಟ್ಟವಳು. ಈ ಭಾವನೆ ಕೂಡ ನನಗೆ ಬಹಳ ಹೊಸತು" ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

"ನಾನು ದೊಡ್ಡ ಕೊಳದಲ್ಲಿ ಸಣ್ಣ ಮೀನಾಗಿರಬಹುದು. 'ಮಾರ್ಟಿನ್' ಹೀರೊಕೇಂದ್ರಿತ ಸಿನಿಮಾ. ಆದರೂ ಇದು ನನ್ನ ವೃತ್ತಿಬದುಕಿಗೆ ಒಂದು ಮೆಟ್ಟಿಲು ಎಂದು ಭಾವಿಸಿದ್ದೇನೆ" ಎಂದು ಹೇಳಿದ್ದಾರೆ. ■



# 'ವೃತ್ತ'ಕ್ಕೆ ಸತೀಶ್ ಬಲ

ನಟ ಸತೀಶ್ ನೀನಾಸಂ ತಮ್ಮ 'ಸತೀಶ್ ಪಿಕ್ಚರ್ ಹೌಸ್' ಬ್ಯಾನರ್ ವತಿಯಿಂದ ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರದ 'ವೃತ್ತ' ಸಿನಿಮಾವನ್ನು ಪ್ರಸ್ತುತಪಡಿಸಿದ್ದಾರೆ.

ಲಿಖಿತ್ ಕುಮಾರ್ ಎಸ್. ನಿರ್ದೇಶಿಸುತ್ತಿರುವ ಈ ಸಿನಿಮಾ, ಬಹು ಭಿನ್ನ ಧಾಟಿಯಲ್ಲಿ ಕಥೆಯನ್ನು ಹೇಳಿಕೊಂಡು ಹೋಗಲಿದೆ ಎಂದು ತಂಡ ಹೇಳಿಕೊಂಡಿದೆ. ಈಚೆಗೆ ಚಿತ್ರದ ಟೀಸರ್ ಬಿಡುಗಡೆಯಾಗಿದ್ದು, ನಿರೂಪಣಾ ಶೈಲಿ ಹಾಗೂ ಸೌಂಡ್ ಡಿಸೈನ್‌ನಿಂದ ಗಮನಸೆಳೆದಿದೆ.

ರಂಗಭೂಮಿ ಹಿನ್ನೆಲೆಯ ಮಾಹಿರ್ ಮೊಹಿದ್ದೀನ್ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಚಿತ್ರದಲ್ಲಿ ನಟ ಚೈತ್ರಾ ಜೆ. ಆಚಾರ್ ಹಾಗೂ ಹರಿಣಿ ಸುಂದರ್‌ರಾಜನ್ ಇದ್ದಾರೆ. ಈ ವರ್ಷದ ಕೊನೆಗೆ ಸಿನಿಮಾ ಬಿಡುಗಡೆ ಮಾಡುವ ಸಿದ್ಧತೆ ನಡೆದಿದೆ.

ಸಿನಿಮಾಗೆ ಬೆಂಬಲ ವ್ಯಕ್ತಪಡಿಸಿರುವ ನೀನಾಸಂ ಸತೀಶ್, 'ಈ ಪ್ರಾಜೆಕ್ಟ್ ಹೊಸಬರದ್ದು ಎನ್ನುವ ಕಾರಣದಿಂದಷ್ಟೇ ಅಲ್ಲ, ಕಥೆ ನಿಜವಾಗಿಯೂ ಕುತೂಹಲಕಾರಿಯಾಗಿದೆ ಎಂಬ ಕಾರಣಕ್ಕೆ ಬೆಂಬಲ ನೀಡಿದ್ದೇನೆ' ಎಂದು ಹೇಳಿದ್ದಾರೆ. ■